ಪಡೆದಿದ್ದ ಪುಟ್ಟಿಗೆ ಜುಳ್ಳಿ ಸೇರಿಸುತ್ತಾ, ಅಡ್ಡ ಬಂದ ತುದಿಗಳನ್ನು ಅಪ್ಪ ಕೊಟ್ಟಿದ್ದ ಕುಡುಗೋಲಿನಿಂದ ಕೊಯ್ಯುತ್ತಾ ಪುಟ್ಟಿ ಹೆಣೀತಾ ಕುಂತಿದ್ಲು. ಭರಮಪ್ಪ ಅರ್ಧ ತಾಸು ಕುಂತ್ರು ಆಕಿ ಪಿಟ್ ಅನ್ಲಿಲ್ಲ. ಕೊನೆಗೆ ತಾನೇ ಚಳಿ ಹತ್ತಿದವನಂತೆ ರಾಗ ತಗ್ಗು ಬಸ್ವಿ... ಅಂದ. 'ನೀನು ಹಲ್ಲು ಕಿಸ್ಕಂದ್ಬಂದಾಗ್ಲೆ ನಂಗೊತ್ತಾತು ನೀನು ರೊಕ್ಕಕ್ಕಾ ಬಂದಿ ಅಂತ ತಗ' ಎಂದು ತಾನೇ ಕಸಬರಿಗೆ ಮಾರಿ ತಂದು ಕೊಟ್ಟಿದ್ದ, ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಐವತ್ತು ರೂಪಾಯಿ ನೋಟನ್ನು ತೆಗೆದು ಅವನ ಮುಖದ ಮೇಲೆ ಬಿಸಾಕಿದಳು. ಎದ್ದು ಬರಲಾಗದೆ, ಕೂಡಲೂ ಮರ್ಯಾದೆಯಿಲ್ಲದೆ ಅಲ್ಲೇ ಕುಂತ ರೂಪಿಯ ಮೂಗಿನ ಸಿಂಬಳದಲ್ಲಿನ ನೊಣದಂತೆ ಅವನ ಮನಸು ಅವಮಾನದಿಂದ ಚಡಪಡಿಸಿತು. ರೂಪಿಯ ತಲೆ ಮೇಲೆ ಕೈಯಾಡಿಸ್ತಾ ಮೆಲ್ಲನೆ ಅಲ್ಲಿಂದೆದ್ದು ಸೀದಾ ನಜೀರ್ ಸಾಬನ ಹೋಟೆಲ್ಲಿಗೆ ಬಂದ. ದಾರೀಲಿ ಸಿಕ್ಕ ಕ್ವಾರಿ ಬೀಡಿಯನ್ನು ಹಚ್ಚಿ ಬಾಯಲ್ಲಿಟ್ಟುಕೊಂಡು ನಂಬರ್ ಬಗ್ಗೇನೇ ಯೋಚ್ನೆ ಮಾಡ್ತಾ ಬರತೊಡಗಿದ. ರೊಕ್ಕ ತಂದಿದ್ದನ್ನು ಸೂಕ್ಷ್ಮವಾಗಿ ಗ್ರಹಿಸಿದ ನಜೀರ್ ಸಾಬ್ ಬಾಕಿಯನ್ನು ಈಗಲೇ ಕಿತ್ತು ಕೊಳ್ಳಬೇಕೆಂದು ಯೋಚ್ನೆ ಮಾಡ್ತಿದ್ದಂಗೆ ಜಮಾಲಿ, ಸೂರಿ, ಇಜ್ಜಿ ಬಂದು ಕುಳಿತರು. ತನ್ನ ಅಪ್ಪನ ಕಾಲದಿಂದ್ಲೂ ಜೋಪಾನವಾಗಿ ಇಟ್ಟುಕೊಂಡು ಬಂದಿದ್ದ ಚಾರ್ಟನ್ನು ಅವರ ಕೈಗೆ ಕೊಟ್ಟ. ಸಂಖ್ಯಾಶಾಸ್ತ್ರಜ್ಞರೂ ನಾಚುವಂತೆ ಆ ಮೂಲೆಯಿಂದ ಈ ಮೂಲೆಗೆ ಈ ಮೂಲೆಯಿಂದ ಆ ಮೂಲೆಗೆ ಲೆಕ್ಕ ಹಾಕುತ್ತಾ, ಮೂರೂ ಜನ ಒಂದಿಷ್ಟು ಸಂಖ್ಯೆಗಳನ್ನು ಹುಡುಕಿ ತೆಗೆದು ಯೋಚ್ನೆ ಮಾಡ್ತಾ ಕುಂತಿದ್ರು.



ಇದ್ದಕಿದ್ದಂತೆ ಜಮಾಲಿ ಎಂಟು ಓಪನ್ ಹೊಡ್ದ, ಅದಕ್ಕ ಆಪೋಜಿಟ್ ಏಳು ಹೊಡ್ದ, ಎಂಬತ್ತೇಳಾತು ಎಂದು ಸುಮ್ಮನಾದ. ಅವರಿಗಿಂತ ನಾನೇನು ಕಮ್ಮಿ ಎಂಬಂತೆ ಇಜ್ಜಿ, 'ಅಲ್ಲೋ ಮಾರಾಯ ಇಲ್ಲಿ ಇಪ್ಪತ್ಮೂರು ಇದಕ್ಕ ಆಪೋಜಿಟ್ ಮೂವತ್ತ್ಯಾಲ್ಡು. ಯಾಲ್ಡು ಹೊರಗ್ಹಾಕಿದ್ರ ಅದಕ್ಕ ಆಪೋಜಿಟ್ ಎಂಟು. ಇಪ್ಪತ್ತೆಂಟು ಆಕ್ತೈತಿ' ಅಂದ. ತಲೆಯಲ್ಲಿದ್ದ ನಂಬರ್ರುಗಳನ್ನು ಒಂದೆಡೆ ಇಟ್ಟುಕೊಳ್ಳಲಾಗದೇ, ಹೇಳಲೂ ಆಗದೆ ಚಡಪಡಿಸುತ್ತಿದ್ದ ಭರಮಪ್ಪ ತಾಸುಗಟ್ಟಲೇ ತಾಳಿದ ಮೌನ ಮುರಿದು 'ಅಲ್ಲೋ ಜಮಾಲಣ್ಣ ಹೋದ್ವಾರ ಜೀರೋ ಎಂಟು ಹೊಡ್ದ. ಈ ವಾರ... ಅಲ್ಲ ಅವ್ನೌನು ಮೂರ್ವಾರ ಆತು ಹಿಡ್ತಾನ ಸಿಗುವಲ್ಡು ನಾ ಒಂದು ಹಾಕಿದ್ರ ಅವ್ನೊಂದು ಹೊಡಿತಾನ. ತಡಿ, ಈ ವಾರನಾದ್ರು ನೋಡಾನ' ಎಂದು ಜಮಾಲಿ ಕೈಯಲ್ಲಿದ್ದ ಚಾರ್ಟನ್ನು ಎಳೆದು ತನ್ನ ಮುಂದೆ ಇಟ್ಟುಕೊಂಡು ಮುದಿ ಎತ್ತಿನಂತೆ ದೀರ್ಘವಾಗಿ ಉಸಿರು ಬಿಟ್ಟು, 'ಮೂವತ್ತು ಮ್ಯಾಲೈತಿ ಅಂದ್ರ ಇಲ್ಲಿ ಇಪ್ಪತ್ತ್ಯೇಳು ಇದಕ್ಕ ಆಪೋಜಿಟ್ ಡಬಲ್ ಜೀರೋ. ಇತ್ಲಾಗ ಇಪ್ಪತ್ಮೂರು. ಐವತ್ತು ಇದಕ್ಕ ಎಂಟು ಕೂಡ್ಸಿದ್ರ ಐವತ್ತೆಂಟು. ಎಂಟು ಹೊರಗಾದ್ರ ಐದು ಉಳೀತು. ಈ ಐದಿಗೆ ಮೂರು ಕೂಡ್ಸಿದ್ರ ಎಂಟು. ಡಬಲ್ ಎಂಟು' ಎಂದು ಐನ್‌ಸ್ಟೀನ್ ಸೂತ್ರ ಕಂಡುಹಿಡಿದಂತೆ ಕೂಡಿಸಿ ಕಳೆದು ನಂಬರ್ ಹೇಳಿದ. ಅದಕ್ಕೆ ಎಲ್ಲರೂ ಒಪ್ಪಿಕೊಂಡರು. ತನ್ನಲ್ಲಿದ್ದ ಐವತ್ತು ರೂಪಾಯಿ ನೋಟನ್ನು ತೆಗೆದು ನಜೀರ್ ಸಾಬನ ಕೈಗೆ ಕೊಟ್ಟ. ಮೊನ್ನೆ ಬಾಕೀದು ಇಪ್ಪತ್ತು ತಗಂಡ್ರ ಇನ್ನೂ ಮೂವತ್ತು ಉಳೀತು ಎಂದು ನಜೀರ್ ಸಾಬ್ ತನ್ನ ಹಳೇ ಬಾಕಿಯನ್ನು ಈಗ್ಲೇ ಇಸ್ಕೊಂಡ್ರ ಚಂದ ಎಂದು ಇಪ್ಪತ್ತು ರೂಪಾಯಿ ಮುರ್ಕೊಂಡ. ಅನಿವಾರ್ಯವಾಗಿ ಉಳ್ದಿದ್ದು ಬರೀ ಎಂದ ಭರಮಪ್ಪ.

ಮನೆಯಲ್ಲಿ ಕಂಬಕ್ಕೊರಗಿ ಕುಳಿತಿದ್ದ ಬಸ್ವಿಗೆ ಬಿರುಗಾಳಿಯಂತೆ ತನ್ನ ಮಾವನ ಮಗ ಪಕ್ಯಾ ತನ್ನ ಮೇಲೆ ಪ್ರಾಣಾನೇ ಇಟ್ಟಿದ್ದ ನೆನಪು ಸರ್ರನೆ ಬಂತು. ಈಚಲ ಬಾರಿಗೆ ತರ್ಲಿಕ್ಕೆ ಹೋದಾಗ ಅವರಪ್ಪನ ಕಣ್ತಪ್ಪಿಸಿ ದಿನಾ ಏನೇನೋ ತಂದು ತಿನ್ನಿಸ್ತಿದ್ದ. ಈಚಲ